**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿವೃದ್ಧಿ/ಗ್ರಂಥಾಲಯ/507/2023 ದಿನಾಂಕ:30.09.2023
C.No: 1195585

## ಸುತ್ತೋಲೆ

**ವಿಷಯ:-** ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳಲ್ಲಿ "ಓದುವ ಬೆಳಕು" ಕಾರ್ಯಕ್ರಮದ ಅಂಗವಾಗಿ **"ವಾರ್ತಾ ಪತ್ರಿಕೆ ಓದೋಣ"** ಅಭಿಯಾನ ಆಯೋಜಿಸುವ ಕುರಿತು.

**ಉಲ್ಲೇಖ:-** ಈ ಕಛೇರಿ ಪತ್ರ ಸಂಖ್ಯೆ:ಕಪಂರಾಆ/ಅಭಿವೃದ್ಧಿ/78/2020 ದಿನಾಂಕ: 03.11.2020

***

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ, ಮಕ್ಕಳು ಓದುವುದರಲ್ಲಿ ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು **"ಓದುವ ಬೆಳಕು"** ಕಾರ್ಯಕ್ರಮವನ್ನು ಅನುಷ್ಠಾನಿಸಲು ಉಲ್ಲೇಖಿತ ಪತ್ರದಲ್ಲಿ ಈಗಾಗಲೇ ತಿಳಿಸಲಾಗಿದೆ. ಸದರಿ ಕಾರ್ಯಕ್ರಮದ ಮೂಲಕ ಶಾಲಾ ಮಕ್ಕಳನ್ನು, ವಿಶೇಷವಾಗಿ ಗ್ರಾಮೀಣ ಮಕ್ಕಳನ್ನು ವ್ಯವಸ್ಥಿತವಾಗಿ ಕಲಿಕಾ ಕ್ಷೇತ್ರಕ್ಕೆ ಮರಳಿ ತರುವ ಹಾಗೂ ನಿರಂತರತೆಯನ್ನು ಕಾಪಾಡುವ ಗುರಿಯನ್ನು ಹೊಂದಲಾಗಿದೆ. ಅರಿವು ಕೇಂದ್ರಗಳನ್ನು ಗ್ರಾಮೀಣ ಜ್ಞಾನ ಕೇಂದ್ರಗಳನ್ನಾಗಿಸಲು ಗ್ರಂಥಾಲಯಗಳ ನವೀಕರಣ, ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಮುಂದುವರೆದು, "ಓದುವ ಬೆಳಕು" ಕಾರ್ಯಕ್ರಮದಡಿಯಲ್ಲಿ ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳಲ್ಲಿ ಹಲವಾರು ಅಭಿಯಾನಗಳ ಮೂಲಕ ಪ್ರತಿ ತಿಂಗಳು ಉಪಯುಕ್ತ ಚಟುವಟಿಕೆಯನ್ನು ಆಯೋಜಿಸಲಾಗಿರುತ್ತದೆ. ಹೀಗೆ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ. ಅದರಂತೆ, ಅರಿವು ಕೇಂದ್ರಗಳಿಗೆ ಭೇಟಿ ನೀಡುವ ಮಕ್ಕಳಲ್ಲಿ ವಾರ್ತಾ ಪತ್ರಿಕೆ ಓದುವ ಹವ್ಯಾಸವನ್ನು ಉತ್ತೇಜಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು **ಅಕ್ಟೋಬರ್-2023 ಮಾಹೆಯಲ್ಲಿ** "**ವಾರ್ತಾ ಪತ್ರಿಕೆ ಓದೋಣ**" ಅಭಿಯಾನವನ್ನು ಆಯೋಜಿಸಲು ನಿರ್ಧರಿಸಿದೆ.

### <u>ಅಭಿಯಾನದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳು:</u>

- ಈ ಅಭಿಯಾನದ ಬಗ್ಗೆ ಗ್ರಂಥಾಲಯ ಮೇಲ್ವಿಚಾರಕರು ಮಕ್ಕಳಿಗೆ ತಿಳಿಸುವುದು.
- ಅರಿವು ಕೇಂದ್ರಗಳಿಗೆ ಭೇಟಿ ನೀಡುವ ಮಕ್ಕಳಿಗೆ ಪತ್ರಿಕೆಯನ್ನು ತೆಗೆದುಕೊಂಡು ಓದಲು ಗ್ರಂಥಾಲಯ ಮೇಲ್ವಿಚಾರಕರು ಪ್ರೋತ್ಸಾಹಿಸಬೇಕು.
- ಮಕ್ಕಳಿಗೆ ವಾರ್ತಾ ಪತ್ರಿಕೆಯ ಮಹತ್ವವನ್ನು ಮತ್ತು ಅದನ್ನು ದಿನ ನಿತ್ಯ ಓದುವುದರಿಂದ ಆಗುವ ಪ್ರಯೋಜನಗಳ ಬಗ್ಗೆ, ಮೇಲ್ವಿಚಾರಕರು ತಿಳಿಸಿಕೊಡಬೇಕು.
- ಪ್ರಾಥಮಿಕ ಮತ್ತು ಪ್ರೌಢಶಾಲಾ ಮುಖ್ಯೋಪಾಧ್ಯಾಯರಿಂದಲೂ ಮಾರ್ಗದರ್ಶನ ಒದಗಿಸಲು ಕ್ರಮ ವಹಿಸುವುದು.
- ಮಕ್ಕಳು ಪತ್ರಿಕೆಯನ್ನು ಓದುವಾಗ ಏನಾದರು ಪ್ರಶ್ನೆಗಳು ಅಥವಾ ಗೊಂದಲಗಳಿದ್ದರೆ, ಮೇಲ್ವಿಚಾರಕರು ಅವನ್ನು ಬಗೆಹರಿಸಬೇಕು.

**ಮಕ್ಕಳು ಪತ್ರಿಕೆಯನ್ನು ಓದಿ ಮುಗಿಸಿದ ನಂತರ, ಈ ಕೆಳಗಿನ ಚಟುವಟಿಕೆಗಳನ್ನು ಮೇಲ್ವಿಚಾರಕರ ಮಾರ್ಗದರ್ಶನದಲ್ಲಿ ಕೈಗೊಳ್ಳುವುದು:**

- ಅವರು ಅಂದು ಓದಿದ ಪತ್ರಿಕೆಯಲ್ಲಿ ಗಮನಿಸಿದ ಮುಖ್ಯ ವಾರ್ತೆಗಳು. ಅದನ್ನು ತಮ್ಮ ಸ್ನೇಹಿತರೊಂದಿಗೆ ಜೋರಾಗಿ ಓದುವ ಮೂಲಕ ಹಂಚಿಕೊಳ್ಳುವುದು.
- ತಾವು ಓದಿದ ವಾರ್ತೆಗಳಲ್ಲಿ, ಯಾವುದಾದರು ವಾರ್ತೆ ತಮ್ಮ ತಾಲೂಕಿಗೆ ಅಥವಾ ಜಿಲ್ಲೆಗೆ ಸಂಬಂಧಿಸಿದೆಯೇ ಎಂಬುದನ್ನು ಕಲೆ ಹಾಕಬೇಕು.
- ಮಕ್ಕಳಿಗೆ ಸಂಬಂಧಿಸಿದ ವಿಷಯವಿದ್ದರೆ, ಅಥವಾ ಮಕ್ಕಳ ಕಾನೂನು-ನೀತಿಗಳ ಬಗ್ಗೆ ವಾರ್ತೆಗಳಿದ್ದರೆ ಅದನ್ನು ಕಲೆ ಹಾಕುವುದು.
- ಸಂಪಾದಕೀಯ, ಓದುಗರ ಅನಿಸಿಕೆಗಳ ವಿಭಾಗ, ಕ್ರೀಡಾ ವಿಭಾಗ, ವಿಶೇಷ ಅಂಕಣ, ವಾಣಿಜ್ಯ ವಿಭಾಗಗಳ ಪ್ರಮುಖ ವಿಷಯಗಳ ಬಗ್ಗೆ ಹಿರಿಯ ವಿದ್ಯಾರ್ಥಿಗಳು ಕಿರಿಯರಿಗೆ ಸರಳವಾದ ರೀತಿಯಲ್ಲಿ ವಿವರಿಸುವುದು.
- ಆ ದಿನದ ಹವಾಮಾನ ವರದಿಯನ್ನು ದಾಖಲಿಸುವುದು.
- ತಾವು ಗಮನಿಸಿದ ವಿವಿಧ ದೇಶಗಳ ಹೆಸರನ್ನು ಪಟ್ಟಿ ಮಾಡುವುದು.
- SSLC ಅಥವ PUC ಗೆ ಸಂಬಂಧಿಸಿದ ಯಾವುದಾದರು ಮಾಹಿತಿಯಿದ್ದರೆ ಅದನ್ನು ಕಲೆಹಾಕುವುದು.
- ಆಂಗ್ಲ ಪತ್ರಿಕೆಗಳನ್ನು ಓದಲು ಉತ್ತೇಜಿಸುವುದು ಹಾಗು ನಿತ್ಯ 10 ಹೊಸ ಆಂಗ್ಲ ಪದಗಳನ್ನು ಪಟ್ಟಿ ಮಾಡುವುದು.
- ಶಬ್ದಕೋಶದಲ್ಲಿ ಆ ಪದಗಳ ಅರ್ಥಗಳನ್ನು ಕಂಡು ಹಿಡಿಯುವುದು.
- ಅಂತೆಯೆ, ಕನ್ನಡ ಪತ್ರಿಕೆ ಓದಿದ್ದಲ್ಲಿ, ಹೊಸ ಕನ್ನಡ ಪದಗಳನ್ನು ಗುರುತಿಸಿ ಅದರ ಅರ್ಥ ಕಂಡು ಹಿಡಿಯುವುದು.
- ತಮ್ಮ ಯಾವುದಾದರು ವಿಚಾರಗಳು, ಕುಂದು ಕೊರತೆಗಳು ಪತ್ರಿಕೆಯಲ್ಲಿ ಬರಬೇಕೆಂದೆನಿಸಿದರೆ, ಅದನ್ನು ಪಟ್ಟಿ ಮಾಡುವುದು.
- ತಾವು ಒಟ್ಟು ಓದಿದ ವಾರ್ತೆಗಳ ಸಂಖ್ಯೆ.
- ಪತ್ರಿಕೆಗಳಲ್ಲಿ ಪ್ರಕಟವಾಗುವ ಪದಬಂಧ, ಸುಡೋಕು, ಇತ್ಯಾದಿಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಬೇಕು.
- ಚಿಣ್ಣರ ವಿಭಾಗದಲ್ಲಿ ಬರುವ ಕಥೆ, ವ್ಯಂಗ್ಯ ಚಿತ್ರಗಳನ್ನು ಓದಲು ಉತ್ತೇಜಿಸುವುದು.
- ಪತ್ರಿಕೆಯಲ್ಲಿ ಯಾವುದಾದರು ಸ್ಪರ್ಧೆಗಳಿಗೆ ಆಹ್ವಾನವಿದ್ದಲ್ಲಿ (ಉದಾ- ಪತ್ರ ಬರೆಯುವುದು, ಚಿತ್ರ ಬಿಡಿಸುವುದು, ಚರ್ಚಾ ಸ್ಪರ್ಧೆ, ಗಾಯನ, ನೃತ್ಯ ಸ್ಪರ್ಧೆ, ಇತ್ಯಾದಿ) ಮಕ್ಕಳು ತಮ್ಮ ಆಸಕ್ತಿಗನುಸಾರವಾಗಿ ಭಾಗವಹಿಸಲು ಪ್ರೋತ್ಸಾಹಿಸಬೇಕು.
- ತಮ್ಮ ಗೆಳೆಯರೂ ಮತ್ತು ಸಹಪಾಠಿಗಳೂ ಈ ಅಭಿಯಾನದಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಿ ಕರೆತರಬೇಕು.

**ಕೆಳಗೆ ಪಟ್ಟಿ ಮಾಡಿರುವ ಈ ಅಭಿಪ್ರಾಯಗಳನ್ನು ಮಕ್ಕಳಿಂದ ಗ್ರಂಥಾಲಯ ಮೇಲ್ವಿಚಾರಕರು ಪ್ರತಿ ವಾರಾಂತ್ಯದಲ್ಲಿ ಸಂಗ್ರಹಿಸಬೇಕು:**

- ನಿಮಗೆ ಪತ್ರಿಕೆ ಓದುವುದು ಇಷ್ಟವಾಯಿತೆ? ನಿಮ್ಮ ನೆಚ್ಚಿನ ಭಾಗ ಯಾವುದು (ಉದಾ- ಕ್ರೀಡೆ, ಸ್ಥಳೀಯ ವಾರ್ತೆ, ಮಕ್ಕಳ ವಿಭಾಗ, ವಿದೇಶಾಂಗ, ವ್ಯಂಗ್ಯ ಚಿತ್ರ, ಇತ್ಯಾದಿ) ಮತ್ತು ಏಕೆ? ನೀವು ಏನನ್ನಾದರೂ ಕಲಿತಿದ್ದೀರಾ?
- ನಿಮಗೆ ಇಷ್ಟವಾದ ಪತ್ರಿಕೆಯ ಹೆಸರೇನು ಮತ್ತು ಏಕೆ ಇಷ್ಟವಾಯಿತು?
- ಪತ್ರಿಕೆ ಓದಿದ ನಂತರದ ಚಟುವಟಿಕೆಗಳಲ್ಲಿ ನಿಮಗೆ ಇಷ್ಟವಾದ ಚಟುವಟಿಕೆ ಯಾವುದು ಮತ್ತು ಯಾಕೆ?
- ನೀವು ಓದಿದ ವಾರ್ತೆಗಳನ್ನು ಶಾಲೆಗೆ ಹೋಗಿ ಸಹಪಾಠಿಗಳೊಂದಿಗೆ ಹಂಚಿಕೊಳ್ಳುತ್ತಿದ್ದೀರಾ?

- ತಾವು ನಿತ್ಯ ಅರಿವು ಕೇಂದ್ರಕ್ಕೆ ಬಂದು ಪತ್ರಿಕೆ ಓದಲು ಇಚ್ಚಿಸುವಿರಾ?
- ಈ ಅಭಿಯಾನದ ಮುಖ್ಯ ಉದ್ದೇಶವೇನೆಂದರೆ, ಮಕ್ಕಳು ದಿನ ನಿತ್ಯ ಪತ್ರಿಕೆಗಳನ್ನು ಓದುವಂತೆ ಪ್ರೋತ್ಸಾಹಿಸುವುದು ಮತ್ತು ಅಭಿಯಾನದ ಉತ್ಸಾಹವನ್ನು ಕಾಪಾಡಿಕೊಳ್ಳಲು ಅವರ ಹೆಸರುಗಳು ಮತ್ತು ಮಕ್ಕಳು ಓದಿದ ವಾರ್ತೆಗಳ ಸಂಖ್ಯೆಯನ್ನು ಗ್ರಂಥಾಲಯದಲ್ಲಿ ಪ್ರದರ್ಶಿಸಬೇಕು.
- ಅಕ್ಟೋಬರ್ ತಿಂಗಳಲ್ಲಿ ಹೆಚ್ಚು ವಾರ್ತೆಗಳನ್ನು ಓದಿದ ಮಕ್ಕಳನ್ನು ಹಾಗೂ ವಿವರಣೆ ನೀಡಿದ ಹಿರಿಯ ವಿದ್ಯಾರ್ಥಿಗಳನ್ನು ತಿಂಗಳ ಕೊನೆಯ ದಿನದಂದು ಘೋಷಿಸಿ ಪ್ರಶಂಸಿಸಬೇಕು.
- ಮಕ್ಕಳು ದಿನ ನಿತ್ಯ ಪತ್ರಿಕೆಗಳನ್ನು ಓದುತ್ತಿರುವುದರಿಂದ ಉಂಟಾಗುತ್ತಿರುವ ಪ್ರಯೋಜನಗಳ ಕುರಿತು ಪೋಷಕರಿಂದ ಅಭಿಪ್ರಾಯ ಪಡೆಯಬೇಕು.

ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸದರಿ ಅಭಿಯಾನದ ಕುರಿತು ಪಂಚತಂತ್ರ 2.0 ತಂತ್ರಾಂಶದ ಈವೆಂಟ್ ಮ್ಯಾನೇಜ್‌ಮೆಂಟ್ ಮಾಡ್ಯೂಲ್‌ನಲ್ಲಿ ಮಾಹಿತಿಯನ್ನು ಇಂದೀಕರಿಸಲು ತಿಳಿಸಿದೆ.

ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳಲ್ಲಿ ಮಕ್ಕಳಿಗೆ "**ವಾರ್ತಾ ಪತ್ರಿಕೆ ಓದೋಣ**" ಅಭಿಯಾನವನ್ನು ಆಯೋಜಿಸುವುದರ ಮೂಲಕ ಕ್ರಮ ಕೈಗೊಳ್ಳುವುದು.

**(ಮಾನ್ಯ ಆಯುಕ್ತರಿಂದ ಟಿಪ್ಪಣಿ ಅನುಮೋದಿತ)**

ನಿರ್ದೇಶಕರು(ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು.

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ಗ್ರಾಮ ಪಂಚಾಯಿತಿಯ ಗ್ರಂಥಾಲಯ ಮೇಲ್ವಿಚಾರಕರುಗಳಿಗೆ(ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ)
5. ಮಾಹಿತಿ ಕೇಂದ್ರ/ವೆಬ್ಸೈಟ್, ಗ್ರಾಅಪ ಇಲಾಖೆ.
6. ಮಾಹಿತಿ ಕೇಂದ್ರ/ವೆಬ್‌ಸೈಟ್, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
4. ಕಛೇರಿ ಪ್ರತಿ.